ಓ ಎಸ್ ನಂ 31/2015

ಪಿ. ಡಬ್ಲ್ಯೂ ಃ 1

ದಿಃ 07.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ 2 (ಬಿ)ರವರ ಪರ ಶ್ರೀ ಬಿ ಎಸ್ ಎಂ ವಕೀಲರಿಂದ ಃ

ಸ.ನಂ. 16 ಮೂಲತಃ 2 ಎಕರೆ 10 ಗುಂಟೆ ಜಮೀನು ಎಂದರೆ ಸರಿ. ಸ.ನಂ. 17 ಮೂಲತಃ 2 ಎಕರೆ 7 ಗುಂಟೆ ಇತ್ತು ಎಂದರೆ ಸರಿ. ದಾವಾ ಐಟಂ ನಂಬರ್ 3 ಸ,ನಂ. 22/2 ರಲ್ಲಿ 1 ಎಕರೆ 31 ಎಕರೆ ಇತ್ತು ಎಂದರೆ ಸರಿ. ದಾವಾ ಐಟಂಗಳು ನನ್ನ ತಂದೆಯವರಿಗೆ ವಿಭಾಗದಲ್ಲಿ ಬಂದಿರುತ್ತದೆ ಎಂದರೆ ಸರಿ. ಸ.ನಂ. 17 ರಲ್ಲಿ ನನ್ನ ತಂದೆಯವರು 2 ಎಕರೆ 7 ಗುಂಟೆಯನ್ನು ಖರೀದಿ ಮಾಡಿದ್ದರು ಎಂದರೆ ಸರಿ. ಆ ಜಮೀನಿನಲ್ಲಿ ನನ್ನ ತಂದೆಯವರು ನನ್ನ ಸಹೋದರರಾದ ಕೆಂಚರಾಮಯ್ಯ ನವರಿಗೆ 7 ಗುಂಟೆ ಮತ್ತು ಮುನಿಯಪ್ಪ ನವರಿಗೆ 2 ಎಕರೆ ಎಂದು ವಿಭಾಗದ ಮೂಲಕ ನೀಡಿದ್ದರು ಎಂದರೆ ಸರಿ. ಕೆಂಚರಾಮಯ್ಯ ನವರಿಗೆ ನೀಡಿದ 7 ಗುಂಟೆ ಜಮೀನನ್ನು ಕೆಂಚರಾಮಯ್ಯ ನವರ ಇಬ್ಬರು ಹೆಣ್ಣು ಮಕ್ಕಳಿಗೆ ದಾನಪತ್ರದ ಮೂಲಕ ನೀಡಿರುತ್ತಾರೆ ಎಂದರೆ ಸರಿ.

ನನಗೆ ಮದುವೆಯಾಗಿ 32 ವರ್ಷಗಳಾಗಿರುತ್ತವೆ. 32 ವರ್ಷಗಳಿಂದ ನಾನು ಕಣಿಮಿಣಿಕೆ ಗ್ರಾಮದಲ್ಲಿ ವಾಸ ಮಾಡುತ್ತಿದ್ದೇನೆ. ನಾನು ಜಟ್ಟಿಪಾಳ್ಯಕ್ಕೆ ಹೋಗಿ ಬರುವುದು ಮಾಡುತ್ತೇನೆ. ನನ್ನ ಅಕ್ಕನ ಹೆಸರು ಲಕ್ಷ್ಮಮ್ಮ. ನನ್ನ ಮತ್ತು ನನ್ನ ಅಕ್ಕನ ಮದುವೆಯ ಸಮಯದಲ್ಲಿ ನನ್ನ ಅಣ್ಣ ಮುನಿಯಪ್ಪ ನವರು ಸರ್ಕಾರಿ ಕೆಲಸದಲ್ಲಿದ್ದರು ಎಂದರೆ ಸರಿ. ನನ್ನ ಅಣ್ಣ ಮುನಿಯಪ್ಪ ನವರ ಹಣಕಾಸಿನ ಪರಿಸ್ಥಿತಿ ಆ ಸಮಯದಲ್ಲಿ ಚೆನ್ನಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಅವರ ಹಣಕಾಸಿನ ಪರಿಸ್ಥಿತಿ ಚೆನ್ನಾಗಿತ್ತು, ಈ ವಿಷಯ ನನಗೆ ಗೊತ್ತಿದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ನಾನು ಆವಾಗ ಸಣ್ಣವಳಾಗಿದ್ದೇನು ಎಂದು ನುಡಿಯುತ್ತಾರೆ. ನನ್ನ ಮದುವೆಯ ಸಮಯದಲ್ಲಿ ನಮ್ಮ ಕುಟುಂಬ ಬಡತನದಲ್ಲಿತ್ತು.

ನನ್ನ ತಂದೆಯವರಿಗೆ ವ್ಯವಸಾಯ ಬಿಟ್ಟರೆ ಬೇರೆ ಯಾವುದೇ ಮೂಲ ಇರಲಿಲ್ಲ ಎಂದರೆ ಸರಿ. ನನ್ನ ಮದುವೆಯ ಸಮಯದಲ್ಲಿ ಮುನಿಯಪ್ಪ ನವರ ಆರ್ಥಿಕ ಪರಿಸ್ಥಿತಿ ಚೆನ್ನಾಗಿದ್ದು ಆದ್ದರಿಂದ ಅವರೇ ನನ್ನ ಮದುವೆ ಮಾಡಿರುತ್ತಾರೆ ಎಂದರೆ ಸುಳ್ಳು. ಆ ಸಮಯದಲ್ಲಿ ನನ್ನ ಮದುವೆ ಮಾಡಲು ಬಿನ್ನಮಂಗಲದ ರಾಮಣ್ಣನವರ ಹತ್ತಿರ ರೂ. 1,50,000/- ಸಾಲ ಪಡೆದಿದ್ದರು ಎಂದರೆ ಸುಳ್ಳು. ಆ ಸಾಲವನ್ನು ಮುನಿಯಪ್ಪ ನವರು ತೀರಿಸಿರುತ್ತಾರೆ ಎಂದು ಸುಳ್ಳು. ಆ ಸಾಲದ ವಿಷಯವಾಗಿ ಇರುವ

ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಪ್ರತಿವಾದಿಗಳು ಸಲ್ಲಿಸಿದರೆ ಅದಕ್ಕೆ ನನ್ನ ತಕರಾರು ಇರುವುದಿಲ್ಲ.

ಸ.ನಂ. 16 ರಲ್ಲಿ 2 ಎಕರೆ 10 ಗುಂಟೆ ಜಮೀನು ಇದ್ದು, ಅದರಲ್ಲಿ 2 ಎಕರೆ ಜಮೀನನ್ನು ನನ್ನ ಅಣ್ಣ ಲಕ್ಷ್ಮಣಪ್ಪ ನವರಿಗೆ ಮತ್ತು 10 ಗುಂಟೆ ಜಮೀನನ್ನು ಕೆಂಚರಾಮಯ್ಯ ನವರಿಗೆ ವಿಭಾಗದ ಮೂಲಕ ನನ್ನ ತಂದೆ ನೀಡಿದ್ದರು ಎಂದರೆ ಸಾಕ್ಷಿ ಅವರು ಏನೇನು ಮಾಡಿಕೊಂಡಿರುತ್ತಾರೋ ನನಗೆ ಗೊತ್ತಿಲ್ಲ.

ಪ್ರಸ್ತುತ ದಾವೆಯಲ್ಲಿ ನಾನು ರೂ. 33 ಲಕ್ಷ ಹಣವನ್ನು ನ್ಯಾಯಾಲಯದಲ್ಲಿ ಪಡೆದು ದಿನಾಂಕ ಃ 6.12.2017 ರಲ್ಲಿ ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸಾಕ್ಷಿ ನಾನು ಯಾವುದೆ ಹಣ ಪಡೆದಿರುವುದಿಲ್ಲ, ನನ್ನ ತಂದೆ ಸಹಿ ಮಾಡು ಎಂದು ಹೇಳಿರುತ್ತಾರೆ, ಆದ್ದರಿಂದ ನಾನು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ದಿನಾಂಕ ಃ 06.12.2017 ರಲ್ಲಿ ಆದೇಶಪುಟದ ಪ್ರಕಾರ ರೂ.33 ಲಕ್ಷ ಹಣ ಪಡೆದಿರುತ್ತೇನೆ ಎಂದರೆ ಸಾಕ್ಷಿ ನಮ್ಮ 2 ನೇ ಅಣ್ಣ ನವರು ನೀಡಿರುವ ಹಣವನ್ನು ನಾನು ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹಣ ಪಡೆದು ದಾವಾ ಐಟಂ ನಂಬರ್ 1 ರ ಸ.ನಂ. 16 ರ 2 ಎಕರೆ 10 ಗುಂಟೆ ಸ್ವತ್ತಿನಲ್ಲಿ 2 ಎಕರೆ ಜಮೀನಿಗೆ ರಾಜಿ ಮಾಡಿಕೊಂಡು ಕೈ ಬಿಟ್ಟಿರುತ್ತೇನೆ ಎಂದರೆ ಸರಿ. ಅದೇ ರೀತಿ ನಾನು ಲಕ್ಷ್ಮಣಪ್ಪ ನವರ ಮಕ್ಕಳನ್ನು ಈ ದಾವೆಯಿಂದ ರಾಜಿ ಮಾಡಿಕೊಂಡು ಕೈಬಿಟ್ಟಿರುತ್ತೇನೆ ಎಂದರೆ ಸರಿ.

ಸದರಿ ದಿನಾಂಕ ಃ 06.12.2017 ರಂದು ದಾವಾ ಪ್ರತಿವಾದಿ 5 ರವರು ಸಹ ರೂ. 33 ಲಕ್ಷ ಹಣ ಪಡೆದು ದಾವೆಯನ್ನು ರಾಜಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ದಾವೆಯನ್ನು ರಾಜಿ ಮಾಡಿಕೊಂಡು ಕೆ ಟಿ ಶಿವಾನಂದ್ ಮತ್ತು ರಾಮಕೃಷ್ಣ ರವರನ್ನು ಕೂಡ ಕೈಬಿಟ್ಟಿರುತ್ತೇವೆ ಎಂದರೆ ಸರಿ. ದಾವಾ ಐಟಂ ನಂಬರ್ 3 ನ್ನು ಕೂಡ ಕೆ ಟಿ ಶಿವಾನಂದ್ ಮತ್ತು ರಾಮಕೃಷ್ಣ ರವರ ಹತ್ತಿರ ರೂ. 14 ಲಕ್ಷ ಹಣ ಪಡೆದು ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ನಮ್ಮ ತಂದೆ ತಾಯಿ ಸಹಿ ಮಾಡು ಎಂದು ಹೇಳಿದ ಕಾರಣ ನಾನು ಸಹಿ ಮಾಡಿರುತ್ತೇನೆ. ನಾನು ಹಣ ಪಡೆದು ದಿನಾಂಕ ಃ 21.11.2023 ರಂದು ಆದೇಶಪುಟದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸುಳ್ಳು. ಸಾಕ್ಷಿಗೆ ಆದೇಶಪುಟವನ್ನು ತೋರಿಸಲಾಗಿ ಸದರಿ ಆದೇಶಪುಟದಲ್ಲಿ ನಾನು ಸಹಿ ಮಾಡಿರುತ್ತೇನೆ, ಆದರೆ ನಾನು ಹಣ ಪಡೆದಿಲ್ಲ ಎಂದು ನುಡಿಯುತ್ತಾರೆ. ಸದರಿ ಆದೇಶಪುಟದಲ್ಲಿ ಯಾರು ಬರೆದಿರುತ್ತಾರೋ ಗೊತ್ತಿಲ್ಲ, ನಾನು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಆದೇಶಪುಟದಲ್ಲಿ ನಮ್ಮ ವಕೀಲರು ಸಹಿ ಮಾಡಿರುತ್ತಾರೆ ಎಂದರೆ ಯಾರು ಸಹಿ ಮಾಡಿರುತ್ತಾರೋ ನನಗೆ ಗೊತ್ತಿಲ್ಲ. ಅದೇ ರೀತಿ ಸದರಿ ದಿನಾಂಕ ಃ 21.11.2023 ರಂದು ಪ್ರತಿವಾದಿ 5 ನನ್ನ ಅಕ್ಕ ಮತ್ತು ಅವರ ಮಕ್ಕಳು ಸಹಿ

ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಮೇಲೆ ಹೇಳಿದ ರೀತಿ ಹಣ ಪಡೆದು ಕೆ ಟಿ ಶಿವಾನಂದ್ ಮತ್ತು ರಾಮಕೃಷ್ಣ ರವರನ್ನು ಪ್ರಸ್ತುತ ದಾವೆಯಿಂದ ತೆಗೆದು ಹಾಕಿರುತ್ತೇನೆ ಎಂದರೆ ಸರಿ.

ನನ್ನ ಅಣ್ಣ ಕೆಂಚರಾಮಯ್ಯ ನವರು ದಿನಾಂಕಃ 2.03.2006 ರಲ್ಲಿ ಸ.ನಂ 22/2 ರಲ್ಲಿ 1 ಎಕರೆ 24 ಗುಂಟೆಯಲ್ಲಿ 20 ಗುಂಟೆ ಯನ್ನು ಶಿವಾನಂದ್ ರವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿ. ಅದೇ ರೀತಿ ಶಿವಾನಂದ್ ರವರು 2011 ರಲ್ಲಿ ಅದೇ ಜಮೀನನ್ನು ರಾಮಕೃಷ್ಣ ರವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿ. ದಾವಾ ಸ್ವತ್ತಿನ ಒಟ್ಟು ಮೌಲ್ಯ 8 ಲಕ್ಷ ಮೌಲ್ಯಮಾಪನ ನಾನು ಮಾಡಿರುತ್ತೇನೆ ಎಂದರೆ ನಾನು ಮಾಡಿರುವುದಿಲ್ಲ. ಮೌಲ್ಯಮಾಪನವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ನನಗೆ ಗೊತ್ತಿಲ್ಲ.ನನ್ನ ವಕೀಲರು ಏನು ಮಾಡಿರುತ್ತಾರೋ ನನಗೆ ಗೊತ್ತಿಲ್ಲ. ಸ.ನಂ. 38 ದಾವಾ ಸ್ವತ್ತು 4 ರ 9 ಗುಂಟೆ ಜಮೀನನ್ನು ನಮ್ಮ ತಂದೆ ಬದುಕಿದ್ದಾಗ ನನ್ನ ಸಹೋದರರು ತಲಾ 3 ಗುಂಟೆ ಎಂದು ವಿಭಾಗ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಬಿ ಎಸ್ ಎಂ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**